ಅ) ರಾಜ್ಯದಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಬೆಂಗಳೂರಿನಲ್ಲಿರುವ ಗ್ರಂಥಾಲಯಗಳೆಷ್ಟು?

ಇ) ಈ ಗ್ರಂಥಾಲಯಗಳ ಪೈಕಿ ಎಷ್ಟು ಗ್ರಂಥಾಲಯಗಳಿಗೆ ಜನರೇಟರ್ ಸೌಲಭ್ಯವನ್ನು ಒದಗಿಸಲಾಗಿದೆ.

ಈ) ಎಲ್ಲಾ ಗ್ರಂಥಾಲಯಗಳಿಗೆ ಜನರೇಟರ್ಸ್‌ಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :-

ಅ) 1934 (ಗ್ರಾಮೀಣ ಗ್ರಂಥಾಲಯಗಳು ಸೇರಿ)

ಆ) 68

ಇ) 41 ಗ್ರಂಥಾಲಯಗಳಲ್ಲಿ ಸೈಲೆಂಟ್ ಜನರೇಟರ್ಸ್ ಅಳವಡಿಸಿದೆ.

ಈ) ಹಣಕಾಸಿನ ಅನುಕೂಲತೆಗನುಗುಣವಾಗಿ ಹಂತಹಂತವಾಗಿ ಜನರೇಟರ್‌ಗಳನ್ನು ಅಳವಡಿಸಲಾಗುವುದು.

ವಿಷಯ :- ಖಾಸಗೀ ಕನ್ನಡ ನರ್ಸರಿ ಶಾಲೆಗಳ ಶಿಕ್ಷಕರಿಗೆ ಪೂರ್ತಿ ಸಂಬಳ ಇತರೇ ಸೌಲಭ್ಯ ನೀಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 775 (1219)

ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಕನ್ನಡ ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ;

ಇ) ಈ ಶಾಲೆಗಳ ಉಪಾಧ್ಯಾಯರುಗಳ ಸಂಬಳಕ್ಕೆ ಸರ್ಕಾರವು ನೀಡುತ್ತಿರುವ ಅನುದಾನದ ಪ್ರಮಾಣವೆಷ್ಟು;

ಈ) ಈ ಶಾಲೆಗಳಲ್ಲಿನ ಎಲ್ಲಾ ಉಪಾಧ್ಯಾಯರುಗಳಿಗೆ ಸರ್ಕಾರವು ಚಿಕ್ ಮೂಲಕ ಪೂರ್ತಿ ಸಂಬಳ ನೀಡಲು ಆಶ್ವಾಸನೆ ನೀಡಿರುವುದು ನಿಜವಲ್ಲವೇ;

ಉ) ಹಾಗಿದ್ದಲ್ಲಿ, ಈ ಶಾಲೆಗಳಲ್ಲಿನ ಉಪಾಧ್ಯಾಯರುಗಳಿಗೆ ಪೂರ್ತಿ ಸಂಬಳ, ಟೈಂಬೌಂಡ್ ಇಂಕ್ರಿಮೆಂಟ್, ಪಿಂಚಣಿ ಹಾಗೂ ಗಳಿಕೆ ರಜ ನಗದು ಹಣ ಪಾವತಿ ಮಾಡುವ ಸೌಲಭ್ಯಗಳನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) 370

ಆ) 370

ಇ) 1) ಪಟ್ಟಣ ಪ್ರದೇಶಕ್ಕೆ ಶೇಕಡ 70
2) ಗ್ರಾಮಾಂತರ ಪ್ರದೇಶಕ್ಕೆ ಶೇಕಡ 70
3) ಬಾಂಬೆ ಕರ್ನಾಟಕ ಪ್ರದೇಶಕ್ಕೆ ಶೇಕಡ 25

ಈ) ಇಲ್ಲ.

ಉ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :- ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯ, ಬೌರಿಂಗ ಮತ್ತು ಇತರೆ ಆಸ್ಪತ್ರೆಗಳ ಸಂದರ್ಶನ ಸಮಿತಿಗಳನ್ನು ಪುನರ್ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 776 (971)

ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಬೆಂಗಳೂರಿನಲ್ಲಿರುವ ವಿಕ್ಟೋರಿಯಾ, ಬೌರಿಂಗ್, ಕೆ.ಸಿ. ಜನರಲ್ ಮತ್ತು ವಾಣಿ ವಿಲಾಸ ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿಗಳನ್ನು ಪುನರ್ ರಚಿಸಿದೆಯೇ?

ಆ) ಪುನರ್ ರಚನೆ ಮಾಡದಿದ್ದಲ್ಲಿ, ಈ ಸಂದರ್ಶನ ಸಮಿತಿಗಳನ್ನು ಯಾವಾಗ ಪುನರ್ ರಚನೆ ಮಾಡಲಾಗುವುದು?

ಡಾ. ಹೆಚ್. ಜಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಹೌದು.

ಆ) ಉದ್ಭವಿಸುವುದಿಲ್ಲ.

ವಿಷಯ :- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 777 (972)

ಶ್ರೀ ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?